ದಿಕ್ಕಿಗೆ ಬರುತ್ತಾರೆ. ಕಂಪನಿ, ಉದ್ಯೋಗ, ಆರ್ಥಿಕತೆ ಇತ್ಯಾದಿ ಇಂದಿನ ದೃಶ್ಯಗಳು ಪ್ರವೇಶಗೊಂಡರೂ, ಸಂಬಂಧಗಳು ಇಲ್ಲಿ ದಿಕ್ಕುತಪ್ಪುತ್ತವೆ. ಹಾಗೆ ನೋಡಿದರೆ ಈ ಕಾಲಮಾನದ ಕಥೆಗಳ ಒಂದು ವೈಶಿಷ್ಟ್ಯವೆಂದರೆ ರಕ್ತಸಂಬಂಧಗಳ ಬಿರುಕು. ಈ ಶತಮಾನದ ಲಕ್ಷಣವೂ ಇದಾಗಿದೆ. ಈ ಕಥೆಯಲ್ಲಿ ಈ ಬಗೆಯ ಬಿರುಕುಗಳಿಗೆ ಗಂಡಿನ ಸಂಶಯಗಳು ಮತ್ತು ದೌರ್ಬಲ್ಯಗಳೇ ಕಾರಣ. ಇಲ್ಲಿ ಹೆಣ್ಣು ತನ್ನನ್ನು ತಾನು ವಿನಾ ಕಾರಣ ದುರ್ಬಲಳು ಎಂದು ಹೇಳುವುದಕ್ಕೇ ತಲುಪುವುದಿಲ್ಲ. ಅನೇಕ ಹೆಣ್ಣುಮಕ್ಕಳ ಕಥೆಗಳಲ್ಲಿ ಗಂಡಿನ 'ಸಂಶಯ' ಮತ್ತು 'ದುರ್ಬಲತೆ'ಗಳೇ ಸ್ಥಾಯಿಯಾಗಿವೆ. ಛಾಯಾ ಅವರ ಇದೇ ಕಥೆಯಲ್ಲಿ ಪುರುಷನ ಬಗ್ಗೆ 'ಜಗತ್ತನ್ನೇ ಗೆದ್ದವನು ಸಂಶಯ ಗೆಲ್ಲಲಾಗದೇ ಸೋತ' ಹೆಣ್ಣು ತನ್ನ ಬಗ್ಗೆ 'ನಾನು ನನ್ನ ಅಹಂ ಬಿಡಲಾಗದೇ ಸೋತೆ' ಎಂಬ ನುಡಿಯನ್ನು ಹೇಳುತ್ತಾಳೆ. ಈ ಸಾಲುಗಳನ್ನು ನಾನು ಉದ್ಧರಿಸಲು ಕಾರಣ, ಇಂದಿನ ಹೆಣ್ಣುಕಥನ ಶೋಧಿಸುತ್ತಿರುವ ಮುಖ್ಯವಿಚಾರಗಳೆಂದರೆ ಸಂಶಯ ಮತ್ತು ಅಹಂಗಳೇ ಆಗಿವೆ. ಆದರೆ, ಇವರು ಇವುಗಳನ್ನು ದೊಡ್ಡ ಮಟ್ಟದ ಸಾಮಾಜಿಕ ಪರಿಸರಕ್ಕೆ ತರುವಲ್ಲಿ ಎಡುವುತ್ತಾರೆ. ಅವು ಕೇವಲ ಸಂಸಾರದ ಚೌಕಟ್ಟಿನಲ್ಲಿಯೇ ಅನೇಕ ಬಾರಿ ಬಂಧಿಯಾಗುತ್ತವೆ. ಛಾಯಾ ಅವರ ಕಥೆಗಳಲ್ಲಿ ಕಾಣುವ ಮತ್ತೊಂದು ಅಂಶ ಇಲ್ಲಿನ ಪಾತ್ರಗಳು ಒಂಟಿತನವನ್ನು ನಿಭಾಯಿಸುವುದು. 'ಮಾಸ್ತರು', 'ಪಾತಿಚಿಕ್ಕಿ' ಇಂಥ ಪಾತ್ರಗಳು ತಮ್ಮಿಂದ ದೂರವಾದ ಜೀವಗಳನ್ನು ಕುರಿತು ಬದುಕನ್ನು ಹುಡುಕುವ ದಾರಿಯಲ್ಲಿ ಕಾಣುತ್ತಾರೆ. ಇಂಥ ಕಡೆ ಭಾಷೆ ಮತ್ತು ನಿರೂಪಣೆಯಲ್ಲಿ ಗಮನಸೆಳೆದರೂ ಸಾಂಸಾರಿಕ ಚೌಕಟ್ಟನ್ನು ಮೀರಿ ಇವು ಹೆಚ್ಚಿನ ಧ್ವನಿಯನ್ನು ಹೊರಡಿಸುವುದಿಲ್ಲ. ಅಲ್ಲಿಯೇ ಸುತ್ತುವರೆಯುತ್ತವೆ. ಇದನ್ನು ದಾಟಬೇಕಾದರೇ ದಟ್ಟವಾದ ಜೀವನ ದರ್ಶನವನ್ನು ಕಂಡುಕೊಳ್ಳಬೇಕು; ಜೊತೆಗೆ ಪಾತ್ರಗಳನ್ನು ಕೇವಲ ಸಂಭಾಷಣೆಯ ಹಂತಕ್ಕೆ ನಿಲ್ಲಿಸದೇ ಸಾಂದ್ರತೆಯನ್ನು ತುಂಬುಬೇಕು. ಈ ಬಗೆಯ ಕಥೆಗಳನ್ನು ಬರೆಯುತ್ತಿರುವ ಅನೇಕರು ತಮ್ಮ ಹಿಂದಿನ ಪಾತ್ರ ಜಗತ್ತಿನ ಪರಂಪರೆಯನ್ನು ಗ್ರಹಿಸದೇ ಹೋದರೆ, ಹೊಸ ಜೀವನದೃಷ್ಟಿಯನ್ನು ಕಾಣಲು ಕಷ್ಟ. ಈ ಕ್ರಮ ಸೃಜನಶೀಲತೆ ಮತ್ತು ಲೋಕದೃಷ್ಟಿಯನ್ನು ಅವಲಂಬಿಸಿರುತ್ತದೆ. ಜಾಗತೀಕರಣದ ಒತ್ತಡದಲ್ಲಿ ಗಂಡು–ಹೆಣ್ಣಿನ ಮಾನಸಿಕ ಇಬ್ಬಂದಿತನಗಳು ಕ್ವಚಿತ್ತಾಗಿ ಕಾಣಿಸಿಕೊಂಡರೂ, ಇನ್ನೂ ಪಕ್ವವಾಗಿ ಗೋಚರವಾಗಬೇಕಾಗಿದೆ. ಅಲ್ಲಿ ಕಾಮ ಸಂಬಂಧಗಳೇ ಎಲ್ಲವನ್ನು ನಿರ್ಧರಿಸಬಲ್ಲವೇ? ಇದನ್ನು ವಿಚಾರ ಮಾಡಬೇಕಾಗುತ್ತದೆ. ಕಾಮವನ್ನು ಸಾಮಾಜಿಕ ವಿದ್ಯಮಾನವೆಂದು ತಿಳಿದರೆ ಅಲ್ಲಿ ಸಿಗುವ ಒಳನೋಟಗಳೇ ಬೇರೆ. ಇಂಥ ಕಡೆ ಎಲ್ಲ ವಾದಗಳನ್ನು ಮೀರಿ ಚರ್ಚಿಸಬೇಕಾಗುತ್ತದೆ. ಹೆಣ್ಣು ಇಂದಿಗೂ ದೈಹಿಕವಾಗಿ ಪಡುತ್ತಿರುವ ನೋವು, ಅವಮಾನಗಳು ಕಥೆಯ ಕೇಂದ್ರಕ್ಕೆ ಬಂದಾಗ ಅಲ್ಲಿ ನಮ್ಮ ಚರ್ಚೆಯನ್ನು ಮತ್ತಷ್ಟು ಚೂಪುಗೊಳಿಸಬೇಕಾಗುತ್ತದೆ. ಅಂಥ ಕಡೆ ಸಮಕಾಲೀನ ವಿದ್ಯಮಾನಗಳ ಜತೆಗಿಟ್ಟು ಚರ್ಚೆ ಮಾಡಬೇಕಾಗುತ್ತದೆ. ಕಥೆಯಂಥ ಕಲಾರೂಪಗಳು ತನ್ನ ಸೃಜನಶೀಲತೆಯ ಉತ್ತುಂಗದಲ್ಲಿ ತಾಜಾತನ ಪಡೆದುಕೊಂಡರೆ ಮಾತ್ರ ಇದು ಸಾಧ್ಯವಾಗುತ್ತದೆ. ತನ್ನ ಸೀಮಿತ ಚೌಕಟ್ಟನ್ನು ಮೀರಿ, ಹೊಸ ಬಗೆಯ ಲೋಕಗಳನ್ನು ನಿರ್ಮಾಣ ಮಾಡಿದರೆ ಚರ್ಚೆಯ ದಾರಿ ಇನ್ನಷ್ಟು ಸುಗಮವಾಗುತ್ತದೆ. ಈ ನಿಟ್ಟಿನಲ್ಲಿ ದಯಾ ಗಂಗನಘಟ್ಟ ಅವರ ಕಥೆಗಳನ್ನು ಚರ್ಚೆ ಮಾಡುವಾಗ ವಸ್ತುವನ್ನು ಮಾತ್ರ ಪ್ರಧಾನವಾಗಿಟ್ಟುಕೊಂಡರೆ, ಸ್ವಲ್ಪ ಮಟ್ಟಿಗೆ ಬೇರೆ ತರದ ಆಲೋಚನೆಗಳು ಬರಬಲ್ಲವು. ಇಲ್ಲಿನ ಗ್ರಾಮ ಜಗತ್ತು ಮತ್ತು ನಗರಲೋಕ ಎರಡೂ ಕೆಳಜಾತಿಗಳ ಹೆಣ್ಣು ಗ್ರಹಿಸಿದ ಲೋಕವೇ ಇಲ್ಲಿದೆ. ಶೌಚಾಲಯಗಳೇ ಇಲ್ಲದ ಹಳ್ಳಿಯ ಹೆಣ್ಣೊಬ್ಬಳು ಬಯಲನ್ನು ಅರಸಿ ಅಲ್ಲಿ ನಡೆಯುವ ನಿಜವಾದ ಹೊರಜಗತ್ತನ್ನು ತೆರೆದಿಡುವ ಕ್ರಮ ಒಂದು ಕಡೆಗಿದೆ. ಪ್ರೀತಿಯನ್ನು ಒಪ್ಪಿಕೊಳ್ಳಲಾರದ ಸಮಾಜವೂ ಇದೆ; ಪೂರ್ವಿಕಲೋಕವೂ ಇದೆ; ಅಪ್ಪನಿಗೆ ಸೂಳೆಯಾಗುವ ಅತ್ಯಂತ ಅವಮಾನಿತ ಹೆಣ್ಣುಮಗಳೂ ಇಲ್ಲಿದ್ದಾಳೆ; ಹೊಸ ಬಗೆಯ ಉದ್ಯೋಗವನ್ನು ಧರಿಸಿ ನಗರ ಬದುಕನ್ನು ಒಂಟಿತನದಿಂದ ನೂಕುವ ಹೆಣ್ಣು ಇದ್ದಾಳೆ. 'ಕೆಳಜಾತಿ ಹೆಣ್ಣುಲೋಕ'ದ ಹಲವು ಮಗ್ಗಲುಗಳನ್ನು ದಯಾ ಅವರು ತಮ್ಮ ಕಥೆಗಳಲ್ಲಿ ಅನಾವರಣ ಮಾಡುತ್ತಾರೆ. ಈ

